





(6ನೇ ಪುಟದಿಂದ)

ವೇಗವಾಗಿ ನುಗ್ಗಿ ಬರುವಾಗ, ಮ್ಯಾಕ್ರೋ ಕ್ಯಾಮರಾ ಕಣ್ಣಿಂದ ಸೆರೆ ಹಿಡಿಯುವುದೂ ಸುಲಭವಿರಲಿಲ್ಲ.

ಅದರ ಕರ್ತವ್ಯಪ್ರಜ್ಞೆಯನ್ನು ಕಂಡಾಗ, ನಾನು ನೆಲದ ಮೇಲೆ ಕುಳಿತೇ ದಿನವಿಡೀ ಇರಬೇಕಾದ ಬೇಸರವೂ ಮಾಯವಾಯಿತು. ಎಲೆ ಮನೆಯ ಆಯಪಾಯಕ್ಕೆ ತಕ್ಕಂತೆ ಅದನ್ನು ಸುರುಳಿಯಾಗಿಸಿ ಇರಿಸುವ ಅದರ ಕಾರ್ಯ ನಮ್ಮ 'ಕೊಟ್ಟೆ' ಇಲ್ಲವೇ 'ಮಾಡೆ'ಯ ನೆನಪು ಹುಟ್ಟಿಸಿತು.

ಪೂರ್ಣ ಪ್ರಮಾಣದ ಕೊಳವೆ ಮನೆ ರಚನೆಯ ಬಳಿಕದ ಹಂತ ತೀರಾ ಕುತೂಹಲಕಾರಿ! ಅದು ಎಲ್ಲಿಂದಲೋ ಮೈಯೆಲ್ಲ ಪರಾಗವನ್ನು ಹೊತ್ತು ತರುವ ದೃಶ್ಯ. ಹೂಗಳಿಂದ ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ, ಪರಾಗ ಸಂಗ್ರಹಿಸಲು ವೇಳೆ ತಗುಲಿದರೂ ಕರ್ತವ್ಯ ಕಡಗಣಿಸಲಿಲ್ಲ. ಪರಾಗದೊಂದಿಗೆ ಹುಳು, ಗೂಡಿನ ಬಾಗಿಲನ್ನು ಸೀಳಿ ಒಳ ನುಗ್ಗುವ ಪರಿಯಂತೂ ಮನಮೋಹಕ! ಗೂಡಿನ ಒಳ ಭಿತ್ತಿಗೆ ತಾನು ತಂದ ಪರಾಗವನ್ನು ಲೇಪಿಸುವುದು. ಮರಿಯ ಆಹಾರಕ್ಕಾಗಿ ಈ ಸಂಗ್ರಹ!

ಬಳಿಕ ಮೂರನೇ ಹಂತದ ಕೆಲಸವೆಂದರೆ ಎಲ್ಲೋ ಎಲೆಯ ಮೇಲೆ ಮೊಟ್ಟೆಯಿಟ್ಟು, ಅದರಿಂದ ಹೊರಬಂದ ಮರಿ ಹುಳು (ಲಾರ್ವ)ವನ್ನು ಹೊತ್ತು ತಂದು ಈ ಮನೆಯೊಳಕ್ಕೆ ಇರಿಸಿದ್ದು! ಕೊನೆಯ ಹಂತವಾಗಿ, ಅಂಟುವಾಳದ ಹಣ್ಣೆಲೆಯನ್ನು ಹೊತ್ತು ತಂದು, ಈ ಪರ್ಣಕುಟೀರದ ಬಾಗಿಲನ್ನು ಮುಚ್ಚಳದಂತೆ ಮುಚ್ಚಿತು.

ಆ ಬಳಿಕವೂ ನಾನು ಅಲ್ಲಿದ್ದುದನ್ನು ಕಂಡ ಅದು, 'ಗೂಡಿನ ತಂಟೆಗೆ ಬಂದರೆ ನೆಟ್ಟಗಿರಲ್ಲ' ಎಂಬಂತೆ ನನ್ನ ಕಿವಿಯ ಬಳಿ ಝೇಂಕರಿಸಿ ಗದರಿಸಿ, ದೂರ ಸರಿಯಿತು!